





# ಇವನ್ಯಾರ ಮಗನೋ..!

ವಾರಣಾಸಿಯ ಬಳಿ ಹಳ್ಳಿಯೊಂದ-ರಲ್ಲಿರುವ ಕೈಲಾಶ್ ಸಿಂಗ್‌ನದು ವಿಚಿತ್ರ ಸ್ವಭಾವ. 65 ವರ್ಷದ ಈ ಪುಣ್ಯಾತ್ಮ ಕಳೆದ 37 ವರ್ಷಗಳಿಂದ ಸ್ನಾನವನ್ನೇ ಮಾಡಿಲ್ಲ! ಗಡ್ಡವನ್ನೂ ಬೋಳಿಸಿಕೊಂಡಿಲ್ಲ! ಗಡ್ಡ 6 ಅಡಿ ಉದ್ದ ಬೆಳೆದಿದೆ.

'ಇದ್ಯಾಕಪ್ಪಾ ಹೀಗಿದ್ದೀಯ? ಸ್ನಾನ ಮಾಡದೆ ದುರ್ವಾಸನೆ ಹೊಡೀತಿದ್ದೀ-ಯಲ್ಲ?' ಎಂದು ಕೇಳಿದರೆ 'ನೀನು ಈ ರೀತಿ ಮಾಡಿದರೆ ನಿನ್ನ ವಂಶ ಉದ್ಧಾರಕ್ಕೆ ಗಂಡು ಮಗ ಜನಿಸುತ್ತಾನೆ' ಎಂದು ಮದುವೆಯಾದ ಹೊಸತರಲ್ಲಿ ಪೂಜಾರಿಯೊಬ್ಬ ಹೇಳಿದ್ದ ಎನ್ನುತ್ತಾನಂತೆ. ಇದನ್ನೇ ಬಲವಾಗಿ ನಂಬಿರುವ ಕೈಲಾಶ್ ಸಿಂಗ್ ಸ್ನಾನವಿಲ್ಲದೇ ಮಗನಿಗಾಗಿ ಕಾಯುತ್ತಿದ್ದಾನೆ. ಮನೆಯವರು ಎಷ್ಟೇ ಒತ್ತಾಯಿಸಿದರೂ ಈತ ಸ್ನಾನಕ್ಕೆ ಒಪ್ಪಿಲ್ಲ. ಬಹಳ ಬಲವಂತ ಮಾಡಿದ್ದಕ್ಕೆ ಈತ ಮುನಿಸಿಕೊಂಡು ಮನೆ ಬಿಟ್ಟು ಓಡಿ ಹೋಗಿದ್ದೂ ಉಂಟು.

ಈಗ 60 ದಾಟಿರುವ ಹೆಂಡತಿ ಕಲಾವತಿ ದೇವಿಯು ಯೌವನದಲ್ಲೇ ಸ್ನಾನ ಮಾಡದ ಈತನ ಜೊತೆ ಮಲಗುವುದಿಲ್ಲ ಎಂದು ಬೆದರಿಸಿದ್ದಳಂತೆ. ಪ್ರಯೋಜನ-ವಾಗಿಲ್ಲ. ಕಡೆಗೆ ಹೆಂಡತಿಯೇ ಗಂಡನಿಗೆ ಒಲಿದಿದ್ದಾಳೆ. ಸಾಲಾಗಿ 7 ಹೆಣ್ಣು ಮಕ್ಕಳು ಹುಟ್ಟಿವೆ; ಮೊಮ್ಮಕ್ಕಳೂ ಆಗಿವೆ.

'65ರ ಹರೆಯದಲ್ಲಿ ಇನ್ನೇನಪ್ಪಾ ಗಂಡು ಮಗು. ಈಗಲಾದರೂ ಸ್ನಾನ ಮಾಡು' ಎಂದರೂ ಈತ ಕೇಳುತ್ತಿಲ್ಲ. 'ನನಗೆ ಮಗನಿಲ್ಲ, ಆದ್ದರಿಂದ ಎಂದೆಂದೂ ಸ್ನಾನ ಮಾಡುವುದಿಲ್ಲ. ಬಹುಶಃ ಮುಂದಿನ ಜನ್ಮದಲ್ಲಿ ಮಗ ಹುಟ್ಟಿದರೆ ಆಗ ಸ್ನಾನ ಮಾಡುತ್ತೇನೆ' ಎನ್ನುವುದು ಈತನ ಅಚಲ ನಿಲುವು. ಹಗಲು, 47 ಡಿಗ್ರಿ ಸೆಲ್ಸಿಯಸ್ ರಣ ಬಿಸಿಲಿನಲ್ಲಿ ಹೊಲದ ಕೆಲಸ ಮಾಡುವ ಈತ, ಸಂಜೆ ಆದಂತೆಯೇ ಗಾಂಜಾ ಸೇದುತ್ತಾ, ಶಿವನ ಪ್ರಾರ್ಥನೆ ಮಾಡುತ್ತಾ ಬೆಂಕಿಯ ಸುತ್ತ ನರ್ತಿಸು-ತ್ತಾನೆ. ಆ ಬೆಂಕಿಯ ಝಳದ ಶಾಖವೇ ಈತನ ಜಳಕ. ನೆರೆಹೊರೆಯವರು, ಊರಿನ ಜನರು ಎಷ್ಟೇ ಅಣಕಿಸಿ, ತಮಾಷೆ ಮಾಡಿ, ಅಸಹ್ಯ ಪಟ್ಟುಕೊಂಡರೂ ಕೈಲಾಶ್ ಸಿಂಗ್‌ನದ್ದು– 'ನಹೀ ಸ್ನಾನೇನ ಸದೃಶಂ' ಎಂಬ ಮಂತ್ರ. 'ಇವನ್ಯಾರ ಮಗನೋ.. ಹಿಂಗವ್ನಲ್ಲ..' ಎಂದು ಹಾಡಬಹುದೆ?

■ ವಿದ್ಯಾ ವಿ ಹಾಲಭಾವಿ